**ದ್ವಿತೀಯ ಭಾಷೆ – ಕನ್ನಡ** **ಪರ್ಯಾಯ ಶೈಕ್ಷಣಿಕ ಯೋಜನೆ 2021–22** **6ನೇ ತರಗತಿ**

**ಫೆಬ್ರವರಿಮಾಹೆ**

| ಕ್ರ.ಸಂ | ತಿಂಗಳುವಾರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **01** | **ಫೆಬ್ರವರಿ ಮೊದಲನೇ ವಾರ** | **ಪದ್ಯ: ಚುಟುಕುಗಳು**<br>• ಸ್ವರಭಾರಕ್ಕೆ ಅನುಗುಣವಾಗಿ ಹಾಡುವುದನ್ನು ಅರಿಯುವರು.<br>• ಚುಟುಕುಗಳನ್ನು ಆಲಿಸಿ ಅರ್ಥವನ್ನು ಗ್ರಹಿಸುವರು.<br>• ಕವಿ ಪರಿಚಯವನ್ನು ಅರಿಯುವರು.<br>• ಚುಟುಕುಗಳ ಅರ್ಥವನ್ನು ಗ್ರಹಿಸುವರು.<br>• ಆಗಸದಲ್ಲಿ ಸೂರ್ಯನ ಕೆಲಸವನ್ನು ಅರಿಯುವರು.<br>• ಮೊಟ್ಟೆಯು ಒಂದು ಕೋಳಿ ಎಂಬ ಸೋಜಿಗವನ್ನು ಅರಿಯುವರು.<br>• ಬಾಂದಳವು ಸಿಂಗಾರಗೊಂಡಿರುವ ರೀತಿಯನ್ನು ಅರಿಯುವರು. | • ಶಿಕ್ಷಕರು ಚುಟುಕುಗಳನ್ನು ಧ್ವನಿ ಏರಿಳಿತದೊಂದಿಗೆ ವಾಚನ ಮಾಡಿ ಹಾಡುವರು.<br>• ಚುಟುಕುಗಳನ್ನು ಒಂದೊಂದಾಗಿ ಮಕ್ಕಳಿಂದ ವಾಚನ ಮಾಡಿಸುವರು.<br>• ಶಿಕ್ಷಕರು ಚುಟುಕುಗಳನ್ನು ಬರೆದ ಕವಿ ಪರಿಚಯವನ್ನು ವಿಡಿಯೋ ಕ್ಲಿಪ್ ಮೂಲಕ ಪರಿಚಯಿಸುವರು.<br>https://youtu.be/cF2eQzG7cnc<br>• ಶಿಕ್ಷಕರು ಪ್ರತಿ ಚುಟುಕುವಿನ ವಿವರಣೆ ವಿವರಿಸುವರು.<br>• ಆಗಸದಲ್ಲಿ ಸೂರ್ಯನ ಕೆಲಸಗಳನ್ನು ವಿವರಿಸುವರು.<br>• ಮೊಟ್ಟೆಯು ಕೋಳಿಯ ಒಂದು ಭಾಗ ಎಂಬುದನ್ನ ವಿವರಿಸುವರು.<br>• ಆಕಾಶವು ಸಿಂಗಾರಗೊಂಡ ರೀತಿಯನ್ನು ವಿವರಿಸುವರು. | • ಚುಟುಕುಗಳನ್ನು ರಾಗವಾಗಿ ಹಾಡುವರು , ಕಂಠಪಾಠ ಮಾಡುವರು.<br>• ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಕ್ರಮವಾಗಿ ಬರೆಯುವರು.<br>• ಚುಟುಕುಗಳ ಸಾರಾಂಶವನ್ನು ಬರೆಯುವರು.<br>• ಆಗಸದಲ್ಲಿ ಸೂರ್ಯನ ಕೆಲಸಗಳನ್ನು ಬರೆಯುವರು.<br>• ಮೊಟ್ಟೆ ಸೋಜಿಗದ ಕೋಳಿ ಹೇಗೆ ಎಂಬುದನ್ನು ಬರೆಯುವರು.<br>• ಬಾಂದಳ ಸಿಂಗಾರಗೊಂಡಿರುವ ರೀತಿಯನ್ನು ಬರೆಯುವರು. |

| | | | | |
|---|---|---|---|---|
| **02** | **ಫೆಬ್ರವರಿ ಎರಡನೇ ವಾರ** | • ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯುವುದನ್ನು ಅರಿಯುವರು.<br>• ಪದಗಳನ್ನು ಬಿಡಿಸಿ ಬರೆಯುವ ರೀತಿಯನ್ನು ಅರಿಯುವರು.<br>• ಪದ್ಯದಲ್ಲಿ ಬಳಕೆಯಾಗಿರುವ ಪ್ರಾಸಪದಗಳನ್ನು ಗುರುತಿಸುವರು. | • ಪದಗಳ ಅರ್ಥ ಪ್ರಾಮುಖ್ಯತೆಯನ್ನು ಚರ್ಚಿಸಿ, ವಾಕ್ಯದಲ್ಲಿ ಬಳಸುವ ವಿಧಾನವನ್ನು ತಿಳಿಸುವರು.<br>• ಪದ್ಯದಲ್ಲಿ ಬಂದಿರುವ ಬಿಡಿಸಿ ಬರೆಯಬಹುದಾದ ಪದಗಳನ್ನು ಪಟ್ಟಿ ಮಾಡಿಸಿ ಬಿಡಿಸಿ ಬರೆಯುವ ವಿಧಾನ ತಿಳಿಸುವರು.<br>• ಪದ್ಯದಲ್ಲಿರುವ ಪ್ರಾಸಪದಗಳನ್ನು ಗುರ್ತಿಸಿ ಬರೆಯುವುದನ್ನು ತಿಳಿಸುವರು. | • ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತವಾಕ್ಯ ಬರೆಯುವರು.<br>• ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯುವರು.<br>• ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಪಟ್ಟಿ ಮಾಡುವರು. |
| **03** | **ಫೆಬ್ರವರಿ ಮೂರನೇ ವಾರ** | **ದೇಶಪ್ರೇಮಿ ಕವಿ ಇಕ್ಬಾಲ್**<br>• ದೇಶಭಕ್ತಿ ಮೆರೆದ ಕವಿಗಳ ಪರಿಚಯ ಮಾಡಿಕೊಡುವರು.<br>• ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತ ಮಿಗಿಲು ಎಂಬುದನ್ನು ಅರಿಯುವರು.<br>• ಇಕ್ಬಾಲ್‌ಮಹಮದ್ ರವರ 'ಸಾರೇ ಜಹಾಂಸೆ ಅಚ್ಚಾ' ಗೀತೆಯನ್ನು ಹಾಡುವ ರೀತಿ ತಿಳಿಯುವರು. | • ಬಂಕಿಮ ಚಂದ್ರ ಚಟರ್ಜಿ, ರವೀಂದ್ರನಾಥ ಠಾಗೋರ್,ಸರೋಜಿನಿ ನಾಯ್ಡು.<br>• ಎ.ಆರ್. ಕೃಷ್ಣಶಾಸ್ತ್ರಿಯವರ 'ಬಂಕಿಮಚಂದ್ರ' ಕೃತಿ ಮೂಲಕ ಪರಿಚಯಿಸುವರು.<br>• 'ರಾಮಾಯಣ'ದ 'ಜನನಿ ಜನ್ಮಭೂಮಿಶ್ಚ ಸ್ವರ್ಗದಪಿಗರಿಯಸಿ' ವಾಕ್ಯದ ಅರ್ಥವನ್ನು ವಿವರಿಸುವರು.<br>• 'ಸಾರೇ ಜಹಾಂಸೆ ಅಚ್ಚಾ' ಗೀತೆಯನ್ನು ರಾಗಬದ್ಧವಾಗಿ ಹಾಡಿ ನೃತ್ಯ ಮಾಡಿಸುವುದು. | • ಬಂಕಿಮಚಂದ್ರ ಚಟರ್ಜಿಯವರ ಪರಿಚಯವನ್ನು ಬರೆಯುವರು.<br>• ಹೆತ್ತತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು ಗಾದೆಯನ್ನು ವಿಸ್ತರಿಸುವರು.<br>• ದೇಶಭಕ್ತಿಗೀತೆಗಳ ಲಹರಿಯನ್ನು ಆಲಿಸುವರು. |
| **04** | **ಫೆಬ್ರವರಿ ನಾಲ್ಕನೇ ವಾರ** | • ಇಕ್ಬಾಲ್‌ಮಹಮದ್‌ರ ಜನನ, ಬಾಲ್ಯ ಮತ್ತು ಶಿಕ್ಷಣದ ಬಗ್ಗೆ ತಿಳಿಯುವರು. | • ಇಕ್ಬಾಲ್‌ರ ಜನನ, ಬಾಲ್ಯ ಹಾಗೂ ಶಿಕ್ಷಣದ ಬಗ್ಗೆ ವಿವರಿಸುವರು. | • ಇಕ್ಬಾಲ್‌ರು ಶಿಕ್ಷಣದಲ್ಲಿ ಸಾಧಿಸಿದ ರೀತಿಯನ್ನು |

| | | | | |
|---|---|---|---|---|
| | | • ಇಕ್ಬಾಲ್‌ರ ಸಾಹಿತ್ಯದ ಸಾಧನೆಯನ್ನು ಅರ್ಥೈಸಿಕೊಳ್ಳುವರು.<br><br>• ಇಕ್ಬಾಲ್‌ರ ಜೀವನ ಸಂದೇಶವನ್ನು ಅರಿಯುವರು.<br><br>• ನಾಮಪದದ ವಿಧಗಳನ್ನು ಅರಿಯುವರು. | • ಇಕ್ಬಾಲ್‌ರು ಕವಿಯಾಗಿ ಬರೆದಿರುವ ಕವಿತೆಗಳ ಸಾರಾಂಶವನ್ನು ತಿಳಿಯುವರು.<br><br>• ಇಕ್ಬಾಲ್‌ರು ಪ್ರತಿಪಾದಿಸಿದ ವಿಶ್ವಭ್ರಾತೃತ್ವ ಸಂದೇಶವನ್ನು ವಿವರಿಸುವರು.<br><br>• ನಾಮಪದದ ವಿಧಗಳನ್ನು ಪಟ್ಟಿ ಮಾಡಿ ತಿಳಿಸುವರು ಹಾಗೂ ಉದಾಹರಣೆ ಸಹಿತ ವಿವರಿಸುವರು. | ವಿವರಿಸುವರು.<br>• ‘ಬಾಗೆಂದಿರಾ’ ಕವನದ ಸಾಲುಗಳ ಸಾರಾಂಶವನ್ನು ಬರೆಯುವರು.<br>• ವಿಶ್ವಭ್ರಾತೃತ್ವ ಎಂದರೇನು ? ಎಂಬುದನ್ನು ಬರೆಯುವರು.<br>• ನಾಮಪದದ ವಿಧಗಳನ್ನು ಬರೆಯುವರು. |

## ಅಭ್ಯಾಸ ಹಾಳೆ–1

**6ನೇ ತರಗತಿ** **ಚುಟುಕುಗಳು** **ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಆಗಸದ ಹೊಲದಲ್ಲಿ ಏನನ್ನು ಬಿತ್ತಿದೆ ?

___________________________________________

2. ಕಂದನು ತೋರಿದ ಸೋಜಿಗದ ಕೋಳಿ ಯಾವುದು ?

___________________________________________

3. ಬಾಂದಳವನ್ನು ಸಿಂಗರಿಸಿದ ರಂಗೋಲೆಯ ಹಿಟ್ಟು ಯಾವುದು ?

___________________________________________

4. ಚುಟುಕುಗಳ ಬ್ರಹ್ಮ ಎಂದು ಯಾವ ಕವಿಯನ್ನು ಕರೆಯಲಾಗಿದೆ ?

___________________________________________

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಆಗಸದಲ್ಲಿ ಸೂರ್ಯನ ಕೆಲಸಗಳೇನು ತಿಳಿಸಿ .

___________________________________________

___________________________________________

___________________________________________ .

2. ಮೊಟ್ಟೆಯನ್ನು ಸೋಜಿಗದ ಕೋಳಿ ಎನ್ನಲಾಗಿದೆ ಏಕೆ ?

___________________________________________

___________________________________________

___________________________________________ .

3. ಬಾಂದಳ ಸಿಂಗಾರಗೊಂಡಿರುವ ಬಗೆಯನ್ನು ವರ್ಣಿಸಿ.

___________________________________________

___________________________________________

___________________________________________ .

**ಹೊಂದಿಸಿ ಬರೆಯಿರಿ :**

1. ನೀರೆ – ಆಕಾಶ ____________________
2. ಮುಗಿಲು – ತಿಲಕ ____________________
3. ಬೊಟ್ಟು – ನಕ್ಷತ್ರ ____________________
4. ಬಾಂದಳ – ಮೋಡ ____________________

– ಸುಂದರಿ ____________________ .

# ಅಭ್ಯಾಸ ಹಾಳೆ–2

**6ನೇ ತರಗತಿ** **ಚುಟುಕುಗಳು** **ದ್ವಿತೀಯ ಭಾಷೆ ಕನ್ನಡ**

**ಈ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಆಯ್ದು ಬರೆಯಿರಿ.:**

ಗಗನ ದೇವಿಯ ಹಣಗೆ ಚಂದಿರನ ಬೊಟ್ಟು
ರಂಗೋಲೆಗಾಗಿ ಬೆಳದಿಂಗಳಿನ ಹಿಟ್ಟು
ಬಾಂದಳವ ಸಿಂಗರಿಸಿದವರಾರು, ತಂಗಿ?
ಹೇಳಿದರೆ ಹೊಲಿಸುವೆನು ಚಿಕ್ಕೆಗಳ ಅಂಗಿ.

**ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದ ಪದವನ್ನು ಆರಿಸಿ ಕೊಟ್ಟಿರುವ ಪದಗಳಿಗೆ ಸರಿ ಹೊಂದುವಂತೆ ಬರೆಯಿರಿ.**
**(ಬಾಂದಳ, ನಕ್ಷತ್ರ, ಭಾಸ್ಕರ, ಸುಂದರಿ, ಶೃಂಗಾರ, ಮೂಳೆ)**

1. ಚಿಕ್ಕೆ : ________________ 2. ಮುಗಿಲು : ________________

3.ಸೂರ್ಯ : ________________ 4. ನೀರೆ : ________________

5. ಎಲುಬು : ________________ 6. ಸಿಂಗಾರ : ________________

**ಈ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ.**

1. ಮುಂಜಾನೆ : ________________________________________
2. ಬೆಳದಿಂಗಳು : ________________________________________
3. ಬೊಟ್ಟು : ________________________________________

**ಈ ಕವಿಯ ವಿವರದ ಚಾರ್ಟ್ ನ್ನು ನೋಡಿ ವಾಕ್ಯ ರೂಪದಲ್ಲಿ ಬರೆಯಿರಿ :**



## ಅಭ್ಯಾಸ ಹಾಳೆ–3

**6ನೇ ತರಗತಿ** **ಚುಟುಕುಗಳು** **ದ್ವಿತೀಯ ಭಾಷೆ ಕನ್ನಡ**

**ಹೊಂದಿಸಿ ಬರೆಯಿರಿ :**

1. ಬಾಂದಳ – ಮೂಳೆ ____________________
2. ಚುಕ್ಕಿ – ಆಕಾಶ ____________________
3. ಸೋಜಿಗದ ಕೋಳಿ – ನಕ್ಷತ್ರ ____________________
4. ಎಲುಬು – ಮೊಟ್ಟೆ ____________________

**ಚಿತ್ರಗಳನ್ನು ನೋಡಿ ನಿಮ್ಮ ಕಲ್ಪನೆಯ ಚುಟುಕುಗಳನ್ನು ರಚಿಸಿ:**

**1.** 

**2.** 

**3.** 

**4.** 

**ಮಾದರಿಯಂತೆ ಪದಬಳ್ಳಿ ರಚಿಸಿರಿ .**

ಮಾದರಿ: ಗಿಡ,ಮರ,ಬಳ್ಳಿ,ಚಿಗುರು, ಹೂವು, ಕಾಯಿ, ಹಣ್ಣು ,ಎಲೆ, ಕಾಂಡ, ಬೇರು

1. ಆಗಸ : ____________________________________________
2. ಕೋಳಿ : ____________________________________________
3. ಶಾಲೆ : ____________________________________________

ಅಭ್ಯಾಸ ಹಾಳೆ–4

6ನೇ ತರಗತಿ ದೇಶಪ್ರೇಮಿ ಕವಿ ಇಕ್ಬಾಲ್ ದ್ವಿತೀಯ ಭಾಷೆ ಕನ್ನಡ

**ಹೊಂದಿಸಿ ಬರೆಯಿರಿ:**

1. 'ಸಾರೇ ಜಹಾಂಸೆ ಅಚ್ಛಾ' – ಬಂಕಿಮಚಂದ್ರ ಚಟರ್ಜಿ
2. ವಂದೇ ಮಾತರಂ – ರವೀಂದ್ರನಾಥ ಠಾಗೋರ್
3. ಜನಗಣಮನ – ಕುವೆಂಪು
4. ಜೈ ಭಾರತ ಜನನಿಯ ತನುಜಾತೆ – ಇಕ್ಬಾಲ್‌ಮಹಮದ್

**ಚಿತ್ರ ನೋಡಿ ಕವಿಯನ್ನು ಹೆಸರಿಸಿ:**

1. 

2. 

3. 

4. 

**ಈ ಕೆಳಗಿನ ಪದಗಳಿಗೆ ಮಾದರಿಯಂತೆ ಸಮಾನಾರ್ಥಕ ಪದಗಳನ್ನು ಬರೆಯಿರಿ:**

**ಮಾದರಿ : ಭೂಮಿ = ಪೃಥ್ವಿ, ಇಳೆ, ಧರೆ, ಧರಿತ್ರಿ, ಬುವಿ**

1. ಆಕಾಶ = ______________________________
2. ತಾಯಿ = ______________________________

## ಅಭ್ಯಾಸ ಹಾಳೆ–5

**6ನೇ ತರಗತಿ** **ದೇಶಪ್ರೇಮಿ ಕವಿ ಇಕ್ಬಾಲ್** **ದ್ವಿತೀಯ ಭಾಷೆ ಕನ್ನಡ**

**ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತ ನಾಮ, ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯಿರಿ:**

ಕೃಷ್ಣ, ಪಟ್ಟಣ, ಮರ, ಕೋಲಾರ, ಮೂಗ, ಕಾಡು, ವಿದ್ವಾಂಸ, ಕಾವೇರಿ, ಕುರುಡ, ಹೊಳೆ, ಕವಿ, ನದಿ, ಬಂಡೆ, ಹಿಮಾಲಯ

ರೂಢನಾಮ= ____________________________________________

ಅಂಕಿತನಾಮ = ____________________________________________

ಅನ್ವರ್ಥನಾಮ = ____________________________________________

**ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ :**

1. 'ಸಾರೇ ಜಹಾಂಸೆ ಅಚ್ಛಾ' ಗೀತೆಯನ್ನು ರಚಿಸಿದ ಕವಿ ಯಾರು ?

   ____________________________________________

2. ಇಕ್ಬಾಲ್‌ಮಹಮದ್‌ರವರ ತಂದೆಯ ಹೆಸರೇನು ?

   ____________________________________________

3. ಇಕ್ಬಾಲ್‌ಮಹಮದ್ ಅವರ ಶಿಕ್ಷಣಕ್ಕೆ ಸಹಾಯ ಮಾಡಿದವರಾರು ?

   ____________________________________________

4. ಭಾರತದ ಭದ್ರಕೋಟೆ ಎಂದು ಯಾವುದನ್ನು ಕರೆಯಲಾಗಿದೆ ?

   ____________________________________________

5. ಇಕ್ಬಾಲ್‌ಮಹಮದ್‌ರವರು ಮಕ್ಕಳಿಗಾಗಿ ಬರೆದ ಕವಿತೆಯ ಹೆಸರೇನು ?

   ____________________________________________

**ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

1. ಇಕ್ಬಾಲ್‌ಮಹಮದ್‌ರ ಕೃತಿಗಳು ಯಾವುವು?

   ____________________________________________

   ____________________________________________

   ____________________________________________

2. ಇಕ್ಬಾಲ್‌ಮಹಮದ್‌ರು ಹಿಮಾಲಯವನ್ನು ಹೇಗೆ ವರ್ಣಿಸಿದ್ದಾರೆ ?

   ____________________________________________

   ____________________________________________

   ____________________________________________

**ಈ ಪದ್ಯದ ಸಾರಾಂಶ ಬರೆಯಿರಿ:**

ಮಜ್‌ಹಬ್ ನಹೀ ಸಿಖಾತಾ ಆಪಸ್ ಮೆ ಬೈರ್ ರಖ್‌ನಾ
ಹಿಂದೀ ಹೈ ಹಂ ವತನ್ ಹೈ ಹಿಂದೂಸ್ಥಾನ್ ಹಮಾರಾ